# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.61/2025

Pw-01

Cw-02

ಸಾಕ್ಷಿದಾರರ ಹೆಸರುಃ ಶ್ರೀ ರಾಜಶೇಖರ ಹರಿಜನ

ತಂದೆ:ಗಂಡನ ಹೆಸರುಃ ಶ್ರೀ ಚಂದ್ರಾಮ

ವಯಸ್ಸುಃ 45 ವರ್ಷ

ಉದ್ಯೋಗಃ ಗ್ರಾಮ ಲೆಕ್ಕಾಧಿಕಾರಿ, ಹಿರೇ ಹುಲ್ಲಾಳ ಗ್ರಾಮ ಪಂಚಾಯತಿ

ವಾಸ ಸ್ಥಳಃ ಅಕ್ಕಿ ಆಲೂರು.

**ದಿನಾಂಕ:27.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2023 ರಿಂದ ಇಲ್ಲಿಯತನಕ ಹಿರೇಹುಲ್ಲಾಳ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ09.10.2025 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನಾನು ಹಿರೇಹುಲ್ಲಾಳ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಶಿಗ್ಗಾಂವ್ ಡಿವೈಎಸ್ಪಿ ರವರು ಬಂದು ಪಂಚನಾಮೆ ಮಾಡಬೇಕಾಗಿದೆ ಸಹಕರಿಸಿ ಎಂದು ಕೋರಿಕೊಂಡರು. ಆಗ ನಾನು ಸದರಿ ವಿಚಾರವನ್ನು ನಮ್ಮ ತಹಶೀಲ್ದಾರವರಿಗೆ ಫೋನ್ ಮೂಲಕ ತಿಳಿಸಿದೆನು. ಅದಕ್ಕೆ ಅವರು ಪಂಚನಾಮೆಗೆ ಹೋಗಿ ಬನ್ನಿ ಎಂದು ತಿಳಿಸಿದರು.

2. ಅದರಂತೆ ನಾನು ಮತ್ತು ಚಾಸಾ-3 ರವರು ಡಿವೈಎಸ್ಪಿ ಜೊತೆ ಚಿಕ್ಕಹುಲ್ಲಾಳ ಗ್ರಾಮದ ಆಸ್ತಿಯ ಸರ್ವೇ ನಂ.9/1 ಮತ್ತು 2 ಇದರ ಸ್ಥಳಕ್ಕೆ ಹೋದೆವು. ಆಗ ಸ್ಥಳದಲ್ಲಿ ಚಾಸಾ-8-ಅಶೋಕ ಗೋವಿಂದಪ್ಪ ನರೇಗಲ್ ಇದ್ದು ನಮಗೆ ಮತ್ತು ಪೊಲೀಸರಿಗೆ ಇದೇ ಜಾಗ ಎಂದು ಘಟನಾ ಸ್ಥಳ ತೋರಿಸಿದರು. ಆಗ ಡಿವೈಎಸ್ಪಿರವರು ಸದರಿ ಸ್ಥಳದಲ್ಲಿ ನಮ್ಮ ಸಮಕ್ಷಮ ಸ್ಥಳ

ಪಂಚನಾಮೆ ಜರುಗಿಸಿ, ಕಬ್ಬಿಣದ ಹಾರೆ, ಕೊಡ್ಲಿ ಮತ್ತು ಬಲ ಕಾಲಿನ ಚಪ್ಪಲಿ ಇವುಗಳನ್ನು ಪಂಚನಾಮೆ ಮೂಲಕ ವಶಪಡಿಸಿಕೊಂಡು, ಪೋಟೋ ತೆಗೆದು, ನಮ್ಮ ಸಹಿಗಳನ್ನು ಪಡೆದುಕೊಂಡರು.

3. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–1 ಎಂದು, ನನ್ನ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಪೊಲೀಸರು ತೆಗೆದ 3 ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ–2 ರಿಂದ 4 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ವಶಪಡಿಕೊಂಡಂತಹ ನ್ಯಾಯಾಲಯದ ಮುಂದಿರುವ ಕಬ್ಬಿಣದ ಹಾರೆ, ಕೊಡ್ಲಿ ಮತ್ತು ಬಲ ಕಾಲಿನ ಚಪ್ಪಲಿ ಇವುಗಳನ್ನು ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ–1 ರಿಂದ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

ಮಾನ್ಯ ವಕೀಲರನ್ನು ಕರೆಸಲಾಯಿತು. ಗೈರು ಹಾಜರು ಉಳಿದಿರುತ್ತಾರೆ. ಶ್ರೀ ಕೆ.ಎಸ್.ಟಿ ಹಾಜರಿದ್ದು, ಶ್ರೀ ಎಂ.ಸಿ.ಹೆಚ್ ರವರಿಗೆ ಆರೋಗ್ಯ ಸರಿಯಿಲ್ಲದೆ ಆಸ್ಪತ್ರೆಗೆ ಹೋಗಿರುತ್ತಾರೆಂದು ಕಾರಣ ಹೇಳಿ ಸಮಯ ಕೇಳಿದ್ದು, ನ್ಯಾಯದಾನ ಹಿತದೃಷ್ಟಿಯಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.